ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 04/07/2019

# ಶಾಸಕರ ರಾಜೀನಾಮೆ ಒಂದು ವ್ಯಾಪಾರ

**ವಿಕ ಸುದ್ದಿಲೋಕ** ಬೆಂಗಳೂರು

ಶಾಸಕರ ರಾಜೀನಾಮೆ ಪ್ರಕರಣವನ್ನು ಕುದುರೆ... ಎಮ್ಮೆ ವ್ಯಾಪಾರವೆಂದು ಬೇಕಾದರೂ ಕರೆಯಿರಿ. ಒಟ್ಟಿನಲ್ಲಿ ಇದೊಂದು ವ್ಯಾಪಾರ ಎಂದು ಹೇಳುವ ಧೈರ್ಯ ನನಗಿದೆ ಎಂದು ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿ, "ಶಾಸಕರಾದವರಿಗೆ ಹೇಗೆ ರಾಜೀನಾಮೆ ಕೊಡಬೇಕು, ಯಾರಿಗೆ ರಾಜೀನಾಮೆ ಕೊಡಬೇಕೆಂಬ ಕನಿಷ್ಠ ಜ್ಞಾನವಿರಬೇಕು. ಈ ಬಗ್ಗೆ ಅರಿವಿಲ್ಲದವರ ಬಗ್ಗೆ ನಾನು ಕನಿಕರ ವ್ಯಕ್ತಪಡಿಸುತ್ತೇನೆ. ನನಗೆ ಅಧಿಕೃತವಾಗಿ ಒಬ್ಬ ಶಾಸಕರು ಮಾತ್ರ ರಾಜೀನಾಮೆ ಕೊಟ್ಟಿದ್ದಾರೆ. ನಾನು ರಾಜೀನಾಮೆ ಕೊಟ್ಟಿದ್ದೇನೆ ಎಂದು ಹೊರಗೆ ನಿಂತು ಮಾತನಾಡುವವರ ಬಗ್ಗೆ ನನಗೇನು ಗೊತ್ತಿಲ್ಲ. ಆ ಬಗ್ಗೆ ಅವರನ್ನೇ ಪ್ರಶ್ನೆ ಮಾಡಿ," ಎಂದು ಹೇಳಿದರು.

"ರಾಜ್ಯಪಾಲರನ್ನು ಭೇಟಿಯಾಗಿ ರಾಜೀನಾಮೆ ಕೊಟ್ಟಿದ್ದಾರೆ ಎಂದರೆ ಉದ್ದೇಶ ಬೇರೆ ಇರಬೇಕು. ಸಮಯವಿದ್ದರೆ ರಾಷ್ಟ್ರಪತಿಗಳನ್ನು ಬೇಕಾದರೂ ಭೇಟಿ ಮಾಡಿ ರಾಜೀನಾಮೆ ಕೊಡಲಿ. ನನ್ನದೇನು ಆಕ್ಷೇಪವಿಲ್ಲ. ಜನಪ್ರತಿನಿಧಿ ವಾಪಸ್ ಕರೆಸಿಕೊಳ್ಳುವ ಕಾನೂನು ಇಲ್ಲ. ಹೀಗಾಗಿ ಡಾ.ಉಮೇಶ್ ಜಾಧವ್ ಪ್ರಕರಣದಲ್ಲಿ ಯಾವ ಕ್ರಮ ಅನುಸರಿಸಲಾಗಿದೆಯೋ, ಅದೇ ರೀತಿ ಈ ಬಾರಿಯೂ ನಡೆದುಕೊಳ್ಳುತ್ತೇನೆ," ಎಂದು ಹೇಳಿದರು.

**ನನ್ನ ಕಚೇರಿ ಬಾಗಿಲು ಸದಾ ಓಪನ್:** ಇನ್ನಷ್ಟು ಶಾಸಕರು ರಾಜೀನಾಮೆ ಸಲ್ಲಿಸುವುದಕ್ಕೆ ನಿಮ್ಮ ಸಮಯ ಕೋರಿದ್ದಾರೆಯೇ ಎಂಬ ಪ್ರಶ್ನೆಗೆ "ಇದುವರೆಗೆ ಯಾರೂ ನನ್ನ ಭೇಟಿಗೆ ಸಮಯ ಕೋರಿಲ್ಲ. ನನ್ನ ಕಚೇರಿ ಬಾಗಿಲು ಸದಾ ತೆರೆದಿರುತ್ತದೆ. ನನ್ನ ಗಣಿತ ಜ್ಞಾನ ಸರಿಯಾಗಿದೆ. ಇದುವರೆಗೆ ತಲುಪಿರುವುದು ಒಂದೇ ರಾಜೀನಾಮೆ ಪತ್ರ," ಎಂದು ಸ್ಪಷ್ಟಪಡಿಸಿದರು.

## ಯಾವುದೇ ಬೇಡಿಕೆ ಇಟ್ಟಿಲ್ಲ: ಸಿಂಗ್

**ಹೊಸಪೇಟೆ:** ಮೈತ್ರಿ ಸರಕಾರಕ್ಕೆ ಯಾವುದೇ ವೈಯಕ್ತಿಕ ಬೇಡಿಕೆ ಇಟ್ಟಿಲ್ಲ ಎಂದು ಶಾಸಕ ಆನಂದ್ ಸಿಂಗ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, "ಎಲ್ಲ ಶಾಸಕರ ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಲಾಗುತ್ತದೋ ಅಷ್ಟೇ ನೀಡಿ ಎಂದಿದ್ದೇನೆ. ವಿಜಯನಗರ ಜಿಲ್ಲೆಯಾಗಬೇಕೆಂದು ಹೋರಾಟ ಮುಂದುವರಿಸುವೆ. ಬ್ಲ್ಯಾಕ್‌ಮೇಲ್ ತಂತ್ರ ಮಾಡಿಲ್ಲ, ಮಂತ್ರಿ ಮಾಡಬೇಕೆಂಬ ಬೇಡಿಕೆ ಇಟ್ಟಿಲ್ಲ, ಜಿಂದಾಲ್‌ಗೆ ಭೂಮಿ ಪರಭಾರೆ ಮಾಡಲು ಒಪ್ಪುವುದಿಲ್ಲ," ಎಂದು ತಿಳಿಸಿದರು.

**ರಾಜೀನಾಮೆ ವಾಪಸಿಗೆ ಪ್ರತಿಭಟನೆ**

ರಾಜೀನಾಮೆ ಹಿಂಪಡೆಯುವಂತೆ ಆಗ್ರಹಿಸಿ ವಿಜಯನಗರ ಕ್ಷೇತ್ರದ ಶಾಸಕ ಆನಂದ್ ಸಿಂಗ್ ಅವರ ಸ್ಥಳೀಯ ನಿವಾಸದ ಮುಂದೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು, ಬುಧವಾರ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಗ್ರಾಮೀಣ ಸಮಿತಿಯ ಜಿಲ್ಲಾ ಘಟಕದ ಅಧ್ಯಕ್ಷ ವಿ.ಎಸ್.ಶಿವಯೋಗಿ ಮಾತನಾಡಿ, "ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಸಿಂಗ್ ಮಂತ್ರಿಯಾಗಿದ್ದರು. ಆ ವೇಳೆ ಜಿಂದಾಲ್‌ಗೆ ಲೀಸ್ ಕಂ ಸೇಲ್ ಆಧರಿಸಿ ಭೂಮಿ ನೀಡಲಾಗಿತ್ತು. ಆಗಲೇ ಅದನ್ನು ವಿರೋಧಿಸಬೇಕಾಗಿತ್ತು" ಎಂದು ಹೇಳಿದರು.

8